ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ

ದಿನಾಂಕ: **01.10.2024**

ಮುಂದುವರೆದ ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ

ಸಾಕ್ಷಿ ದೂರಿನಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ **1** ಎಂದು , ಸಾಕ್ಷಿ ಸಹಿ ನಿಪಿ **1**ಎ ಎಂದು , ಮಹಜರನ್ನು ನಿಪಿ **2** ಎಂದು , ಸಾಕ್ಷಿಯ ಸಹಿಯನ್ನು ನಿಪಿ **2**ಎ ಎಂದು , ವಿವಾಹ ಆಮಂತ್ರಣ ಪತ್ರಿಕೆಯನ್ನು ನಿಪಿ **3** ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಶ್ರೀ ಹೆಚ್ ಸಿ ಎಮ್ ಕೆ ವಕೀಲರಿಂದ**

ನನ್ನ ಮತ್ತು ಆರೋಪಿಯ ವಿವಾಹ **24.10.2004** ರಲ್ಲಿ ನಡೆದಿರುತ್ತದೆ. ಮೊದಲಿಗೆ ಆರೋಪಿಯ ವಿರುದ್ದ ಜೀವನಾಂಶಕ್ಕಾಗಿ ಕೆ ಆರ್ ಪೇಟೆ ನ್ಯಾಯಾಲಯದಲ್ಲಿ **2017** ರಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ಸದರಿ ಪ್ರಕರಣದಲ್ಲಿ ನಾನು **24.09.2004** ರಲ್ಲಿ ವಿವಾಹವಾಗಿದ್ದೇನೆ ಎಂದು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಕಾರಣಕ್ಕಾಗಿ ಸದರಿ ಪ್ರಕರಣ ವಜಾಗೊಂಡಿದ್ದು ನಂತರ ಮತ್ತೊಂದು ಪ್ರಕರಣ ದಾಖಲಿಸಲಾಯಿತು ಎಂದರೆ ಸರಿಯಲ್ಲ. ನಿಪಿ **3** ನ್ನು ಮತ್ತೊಂದು ಪ್ರಕರಣ ದಾಖಲಿಸುವಾಗ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ನಿಪಿ **1** ರಲ್ಲಿ ಸೆಪ್ಟೆಂಬರ ತಿಂಗಳಲ್ಲಿ ವಿವಾಹವಾಗಿರುವುದಾಗಿ ಬರೆದು ನಂತರ ಅದನ್ನು ತಿದ್ದಿ ಅಕ್ಟೋಬರ ಎಂದು ಬರೆಯಲಾಗಿದೆ ಎಂದರೆ ಸರಿ . ನಾನು **2017** ರಿಂದ ನನ್ನ ತಾಯಿ ಮನೆಯಾದ ಕೆ ಆರ್ ಪೇಟೆಯಲ್ಲಿ ವಾಸವಿದ್ದು , **1** ವರ್ಷದಿಂದ ಈಚೆ ಕುಶಾಲನಗರದಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಿದ್ದೇನೆ. ನಿಪಿ **1** ನ್ನು ನೀಡುವ ದಿನದಂದು ಅಂದರೆ ಜನವರಿ **5** ರಂದು ನಾನು ಕುಶಾಲನಗರಕ್ಕೆ ಬಂದಿದ್ದು ಅದೇ ದಿನ ಗಲಾಟೆಯಾದ ಕಾರಣ ನಿಪಿ **1** ನ್ನು ದಾಖಲಿಸಿರುತ್ತೇನೆ. ಆ ಸಮಯದಲ್ಲಿ ನಾನು ಕುಶಾಲನಗರದ ನಮ್ಮ ಅಕ್ಕನ ಮನೆಯಲ್ಲಿ ಇದ್ದು

ನಿಪಿ **1** ನ್ನು ನೀಡಿದ ನಂತರ **4-5** ದಿನ ಅಲ್ಲೇ ಇದ್ದೆ . ಅದಾದ ನಂತರ ನಾನು ನನ್ನ ತಾಯಿಯ ಮನೆ ಕೆ ಆರ್ ಪೇಟೆಗೆ ಹೋಗಿದ್ದು ಅದಾದ ನಂತರ ನನಾು ಕುಶಾಲನಗರಕ್ಕೆ ಬಂದಿರುವುದಿಲ್ಲ. ನಾನು ಜನವರಿ **5** ನೇ ತಾರೀಖು ಆರೋಪಿಯ ಮನೆ ಗೆ ಬಂದಾಗ ಅಂದಾಜು ಮದ್ಯಾಹ್ನ **12.00** ಗಂಟೆಗೆ ಬಂದಿದ್ದು ನನ್ನೊಂದಿಗೆ ನನ್ನ ತಮ್ಮ ಮತ್ತು ತಾಯಿಯ ಬಂದಿದ್ದರು. ಪೋಲೀಸರು ನನ್ನ ತಾಯಿಯ ಮತ್ತು ತಮ್ಮನ ಬಳಿ ಹೇಳಿಕೆ ಪಡೆದಿರುವುದಿಲ್ಲ. ಪೋಲಿಸರಿಗೆ ಗಲಾಟೆಯ ಸಮಯದಲ್ಲಿ ನನ್ನ ತಾಯಿಯ ಮತ್ತು ತಮ್ಮ ನನ್ನ ಜೊತೆಯಲ್ಲಿ ತದ್ದ ಬಗ್ಗೆ ತಿಳಿಸಿರುತ್ತೇನೆ. ಸಿ ಆರ್ ಎಮ್ ಸಿ ಪ್ರಕರಣದಲ್ಲಿ ಆರೋಪಿಯೊಂದಿಗೆ ಜೊತೆಯಾಗಿ ವಾಸಿಸಲು ಯಾವುದೇ ಆದೇಶವಾಗಿರಲಿಲ್ಲ ಎಂದರೆ ಸರಿಯಲ್ಲ. ಮೊದಲು ದಾಖಲಿಸಿದ ಸಿ ಆರ್ ಎಮ್ ಸಿ ಪ್ರಕರಣ ವಜಾ ಆದ ಕಾರಣ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಗಲಾಟೆಯ ನಂತರ ನಾನು ಕುಶಾಲನಗರ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಆಸ್ಪತ್ರೆಯಲ್ಲಿ ವೈದ್ಯರಾದ ಕೀರ್ತಿರಾಜ ರವರ ಮುಂದೆ ಜನವರಿ **6** ನೇ ತಾರೀಖು ಹೇಳಿಕೆ ನೀಡಿರುತ್ತೇನೆ. ನಿಪಿ **1** ರಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ಬಗ್ಗೆ ನಮೂದಿಸಿಲ್ಲ ಎಂದರೆ ಸಾಕ್ಷಿ ಪೋಲಿಸರು ಹೇಳಿ ಕೊಟ್ಟ ರೀತಿಯಲ್ಲಿ ನಿಪಿ **1** ನ್ನು ಬರೆದಿದ್ದೇನೆ ಎನ್ನುವವರು. ಗಲಾಟೆಯ ಸಮಯದಲ್ಲಿ ಚಾಸಾ **2** ರಿಂದ **4** ರವರು ಹಾಜರಿದ್ದರು. ಚಾಸಾ **2** ರಿಂದ **4** ರವರು ನನಗೆ ಮೊದಲಿಂದಲೂ ಪರಿಚಯ . ವೆಂಕಟೇಶ ಎಂಬುವವರು ಆರೋಪಿಯ ದೊಡ್ಡಪ್ಪ ಆಗಿದ್ದು ಅವರು ನನ್ನ ಅಕ್ಕನನ್ನು ವಿವಾಹ ಆಗಿರುತ್ತಾರೆ. ಗಲಾಟೆಯ ಸಮಯದಲ್ಲಿ ವೆಂಕಟೇಶರವರು ಹಾಜರು ಇರಲಿಲ್ಲ. ಆದರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಹಾಗು ನಿಪಿ **1** ನ್ನು ದಾಖಲಿಸುವಾಗ

ಹಾಜರಿದ್ದರು. ಚಾಾ **2** ರಿಂದ **4** ರವರು ವೆಂಕಟೇಶ ರವರಿಗೆ ಪರಿಚಯ ಎಂದರೆ ಸರಿ . ಸದರಿ ವೆಂಕಟೇಶ ರವರ ವಿರುದ್ದ ಆರೋಪಿ ವಿಭಾಗ ಕೇಳಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸಾಕ್ಷಿ ನಾನು ಅವರೊಂದಿಗೆ ವಾಸವಿದ್ದಾಗ ಸಲ್ಲಿಸಿರಲಿಲ್ಲ ನಂತರ ಸಲ್ಲಿಸಿದ್ದಾರೆ ಎನ್ನುವವರು.

ಜನವರಿ **25** ರಿಂದು ಸಂಜೆ **4.30** ಗಂಟೆಗೆ ಪೋಲಿಸರು ಕೃತ್ಯ ಸ್ಥಳಕ್ಕೆ ಮಹಜರಿಗೆ ಬಂದಿರುತ್ತಾರೆ. ಜನವರಿ **25** ರಂದು ಯಾವುದೇ ಮಹಜರನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ಪೋಲಿಸರು ಯಾವುದೇ ದಾಖಲೆಗಳನ್ನು ಪಡೆದಿರುವುದಿಲ್ಲ. ಮಹಜರಿನಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಮಹಜರಿಗೆ ಚಾಸಾ **2, 3,** ಹಾಗು ಚೆನ್ನಣ್ಣ ಎಂಬುವವರು ಸಹಿ ಮಾಡಿರುತ್ತಾರೆ. ನಿಪಿ **2** ರಲ್ಲಿ ಚೆನ್ನಣ್ಣ ನವರ ಸಹಿ ಇಲ್ಲ ಎಂದರೆ ಸರಿ .

ಮರು ದಿನ ಪೋಲಿಸ್ ಠಾಣೆಯಲ್ಲಿ ನನ್ನಿಂದ **2** ಸಹಿ ಪಡೆದಿದ್ದು ಅದು ಯಾವ ದಾಖಲೆಗಳು ಎಂದು ನನಗೆ ನೆನಪಿಲ್ಲ. ನಾನೇ ಕೃತ್ಯ ಸ್ಥಳವನ್ನು ತೋರಿಸಿಕೊಟ್ಟಿದ್ದು ಅದರ ಚೆಕ್ಕುಬಂದಿ ಹೇಳಲು ಬರುವುದಿಲ್ಲ. ಗಲಾಟೆಯ ಸಮಯದಲ್ಲಿ ಸುಮಾರು **10** ಜನ ನಿಂತು ನೋಡುತ್ತಿದ್ದರು. ಅವರ ಹೆಸರಗಳನ್ನು ನಾನು ಪೋಲಿಸರಿಗೆ ತಿಳಿಸಿರುವುದಿಲ್ಲ. ನಿಪಿ **2** ನ್ನು ಪೋಲಿಸರು **4.30** ರಿಂದ **5.30** ರವರೆಗೆ ಬರೆದಿರುತ್ತಾರೆ. ನಿಪಿ **2** ನ್ನು ಪೋಲಿಸರು ಚಾಸಾ **2** ಮತ್ತು **3** ರವರಿಗೆ ಓದಿ ತಿಳಿಸಿದ್ದು ನನಗೆ ಓದಿ ತಿಳಿಸಿರುವುದಿಲ್ಲ.

ನಿಪಿ **1** ರಲ್ಲಿ ತಿಳಿಸಿರುವಂತೆ ಯಾವುದೇ ಗಲಾಟೆಯಾಗದಿದ್ದರೂ ಆರೋಪಿಯ ವಿರುದ್ದ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ

ಸರಿಯಲ್ಲ.ನಿಪಿ **2** ನ್ನು ಸ್ಥಳದಲ್ಲಿ ತಯಾರಿಸಿಲ್ಲ ಬದಲಿಗೆ ಠಾಣೆಯಲ್ಲೇ ತಯಾರಿಸಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಕೆ ಆರ್ ಪೇಟೆ ನ್ಯಾಯಾಲಯದಲ್ಲಿ ಆರೋಪಿ ಜಿವನಾಂಶದ ಹಣವನ್ನು ನೀಡದ ಕಾರಣ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಸಮಯದಲ್ಲಿ ನಾನು ದೂರಿನಲ್ಲಿ ತಿಳಿಸಿರುವಂತೆ ಯಾವುದೇ ದೌರ್ಜನ್ಯ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೆ ಘಟನಾಯಾಗದ ಕಾರಣ ನಿಪಿ **1** ರಲ್ಲಿ ಘಟನೆಯ ದಿನಾಂಕ ಅಥವಾ ಸಮಯ ನಿಖರವಾಗಿ ಬರೆದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಸಿವಿಲ್ ನ್ಯಾಯಾಧೀಶರು,
ಕುಶಾಲನಗರ.